ಅನಾವರಣಗೊಳಿಸುವ ಪ್ರಯತ್ನದ ರೈ ಸಿನಿಮಾ, ಪೋಸ್ಟರ್‌ಗಳು ಹಾಗೂ ವಿಭಿನ್ನ ಪ್ರಚಾರ ತಂತ್ರದಿಂದ ಗಮನಸೆಳೆದಿದೆ. ಪ್ರಕಾಶ್ ರೈ ಎಂದ ಮೇಲೆ ಅಭಿರುಚಿಯ ಮಟ್ಟಿಗೆ ರಾಜಿಯಾಗದ ಸಿನಿಮಾ ಎಂದು ಕೂಡ 'ಇದೊಳ್ಳೆ ರಾಮಾಯಣ'ದ ಬಗ್ಗೆ ಪ್ರೇಕ್ಷಕರು ಆಶಾಭಾವ ಇಟ್ಟುಕೊಳ್ಳಬಹುದು.

ಹೊಸ ಹುಡುಗ ನಿಖಿಲ್ ಹಾಗೂ ಅನುಭವಿ ಪ್ರಕಾಶ್ ರೈ ನಡುವೆ ನುಗ್ಗಲು ಅಣಿಯಾಗುತ್ತಿರುವ ಮತ್ತೊಂದು ಚಿತ್ರ 'ದನ ಕಾಯೋನು'. ಯೋಗರಾಜ ಭಟ್ ನಿರ್ದೇಶನದ ಈ ಚಿತ್ರ ಸಾಕಷ್ಟು ಸಮಯದಿಂದ ಹುಲ್ಲುಗಾವಲಿನಲ್ಲಯೇ ಬೆಚ್ಚಗೆ ಕೂತಿದ್ದು, ದಸರೆ ಸಂದರ್ಭದಲ್ಲಿ ಚಿತ್ರಮಂದಿರಗಳಿಗೆ ಬರಲಿದೆ. ಭಟ್ಟರ ಮಾತನ್ನು ನಂಬುವುದಾದರೆ, ಅ. 7ರಂದೇ 'ದನ ಕಾಯೋನು' ತೆರೆ ಕಾಣುವುದು ಖಚಿತ. ದುನಿಯಾ ವಿಜಯ್ ಹಾಗೂ ಪ್ರಿಯಾಮಣಿ ಮುಖ್ಯ ಭೂಮಿಕೆಯಲ್ಲಿರುವ ಈ ಚಿತ್ರ ಕೂಡ 2016ರ ನಿರೀಕ್ಷೆಯ ಚಿತ್ರಗಳಲ್ಲೊಂದಾಗಿದೆ.

ಪವನ್ ಒಡೆಯರ್ ನಿರ್ದೇಶನದ 'ನಟರಾಜ ಸರ್ವಿಸ್' ಕೂಡ ದಸರೆ ಸಂದರ್ಭದಲ್ಲೇ ತೆರೆ ಕಾಣುವ (ಅ. 14ರಂದು) ಉಮೇದಿನಲ್ಲಿದೆ. ಶರಣ್ ಹಾಗೂ ಮಯೂರಿ ಜೋಡಿಯ ಈ ಚಿತ್ರದ ಹಾಡುಗಳು ಜನಪ್ರಿಯವಾಗಿರುವುದು ಚಿತ್ರ ತಂಡದ ಉತ್ಸಾಹ ಹೆಚ್ಚಲು ಕಾರಣವಾಗಿದೆ.

ಶಾಲಾ ಕಾಲೇಜುಗಳಿಗೆ ರಜೆ ಇರುವ ಸಮಯದಲ್ಲಿ ತೆರೆ ಕಾಣುವ ಮೂಲಕ ಹೆಚ್ಚು ಜನರನ್ನು ತಲುಪಬಹುದು ಎನ್ನುವುದು ನಿರ್ಮಾಪಕ–ನಿರ್ದೇಶಕರ ನಿರೀಕ್ಷೆ. ಈ ಲೆಕ್ಕಾಚಾರ ಸರಿಯೇ. ಆದರೆ, ದೊಡ್ಡ ಚಿತ್ರವೊಂದು ತೆರೆ ಕಂಡರೆ ಹೆಚ್ಚಿನ ಸಂಖ್ಯೆಯ ಚಿತ್ರಮಂದಿರಗಳು ಆ ಸಿನಿಮಾಕ್ಕೆ ಸೀಮಿತಗೊಳ್ಳುತ್ತವೆ. ಆ ಚಿತ್ರದ ಬೆನ್ನಿಗೆ ತೆರೆ ಕಾಣುವ ಒಳ್ಳೆಯ ಚಿತ್ರ ಥಿಯೇಟರ್‌ಗಳ ಕೊರತೆ ಎದುರಿಸಬೇಕಾಗುತ್ತದೆ. ವಾಸ್ತವ ಹೀಗಿರುವಾಗ, ಬೇರೆ ಬೇರೆ ಕಾರಣಗಳಿಂದಾಗಿ ನಿರೀಕ್ಷೆ ಹುಟ್ಟಿಸಿರುವ ನಾಲ್ಕೈದು ಚಿತ್ರಗಳು ಎರಡು ವಾರದ ಅಂತರದಲ್ಲಿ ತೆರೆ ಕಾಣುವುದು ಕನ್ನಡ ಚಿತ್ರರಂಗದ ಹಿತಾಸಕ್ತಿಯ ದೃಷ್ಟಿಯಿಂದ ಒಳ್ಳೆಯದೇನೂ ಅಲ್ಲ. ವಿಜಯದಶಮಿ ನಿರೀಕ್ಷೆಯಲ್ಲಿರುವ ಕನ್ನಡ ಚಿತ್ರೋದ್ಯಮ ಆಂತರಿಕ ಪೈಪೋಟಿಯಿಂದ ಜರ್ಝರಗೊಳ್ಳದಂತೆ ಎಚ್ಚರ ವಹಿಸಬೇಕಾಗಿದೆ.

■ ರಘು



## ಹಳೆಯ ಜಾಡಿನಲ್ಲಿ ಹೊಸ ಕಥೆ

ಖ್ಯಾತನಾಮರ ಸಾವಿನ ಹಿಂದಿನ ಕುತೂಹಲಕರ ಕಥನಗಳನ್ನು ದೃಶ್ಯಮಾಧ್ಯಮಕ್ಕೆ ಅಳವಡಿಸುವಲ್ಲಿ ಎ.ಎಂ.ಆರ್. ರಮೇಶ್ ಸಿದ್ಧಹಸ್ತರು. 'ಸೈನೈಡ್', 'ಅಟ್ಟಹಾಸ' ರೀತಿಯ ವಿಭಿನ್ನ ಚಿತ್ರಗಳನ್ನು ನಿರ್ದೇಶಿಸಿದ್ದ ಅವರೀಗ, ರಾಜೀವ್‌ಗಾಂಧಿ ಹತ್ಯೆಯ ಹಿಂದಿನ ಕಥನವನ್ನು ಚಿತ್ರರೂಪಕ್ಕೆ ಅಳವಡಿಸುತ್ತಿದ್ದಾರೆ. ಈ ಮುನ್ನ, ರಾಜೀವ್ ಹಂತಕರ ಕೊನೆಯ ದಿನಗಳ ಸಿನಿಮಾ ನಿರ್ದೇಶಿಸಿದ್ದ ಅವರು, ಹೊಸ ಚಿತ್ರದಲ್ಲಿ ಹತ್ಯೆಯ ಸಂದರ್ಭದ ಕಥೆ ಹೇಳುತ್ತಿದ್ದಾರೆ.

ರಮೇಶ್ ನಿರ್ದೇಶನದ ಹೊಸ ಚಿತ್ರದ ಹೆಸರು 'ಆಸ್ಫೋಟ'. ಕಳೆದ ವಾರವಷ್ಟೇ ನಡೆದ ಚಿತ್ರದ ಮುಹೂರ್ತ ಕಾರ್ಯಕ್ರಮದಲ್ಲಿ — ಸಿಬಿಐನ ಮಾಜಿ ವಿಶೇಷ ನಿರ್ದೇಶಕ ಡಿ.ಆರ್. ಕಾರ್ತಿಕೇಯನ್, ನಿವೃತ್ತ ಪೊಲೀಸ್ ಅಧಿಕಾರಿಗಳಾದ ಕೆ. ಶ್ರೀನಿವಾಸನ್, ಗೋಪಾಲ್ ಬಿ. ಹೊಸೂರ್, ರಾಮಲಿಂಗಮ್ ಮುಂತಾದವರು ಭಾಗವಹಿಸಿದ್ದುದು ವಿಶೇಷ. ನವೆಂಬರ್‌ನಲ್ಲಿ ಚಿತ್ರೀಕರಣ ನಡೆಯಲಿದೆ. 2017ರಲ್ಲಿ, ರಾಜೀವ್ ಪುಣ್ಯತಿಥಿಯಾದ ಮೇ 21ರ ವೇಳೆಗೆ ಚಿತ್ರವನ್ನು ತೆರೆ ಕಾಣಿಸುವುದು ಅವರ ಉದ್ದೇಶ.

ಎರಡು ದಶಕಗಳ ಕಾಲ ನಡೆಸಿದ ಸಂಶೋಧನೆಯ ಫಲ 'ಆಸ್ಫೋಟ' ಎನ್ನುತ್ತಾರೆ ರಮೇಶ್. 'ಘಟನೆಗೆ ಸಂಬಂಧಿಸಿದ ವಿವರಗಳನ್ನು ಕಲೆಹಾಕಲಿಕ್ಕಾಗಿ ವಿದೇಶಗಳಿಗೂ ಭೇಟಿ ಕೊಟ್ಟಿದ್ದಾರೆ. 101 ದಿನಗಳಲ್ಲಿ ನಡೆದ, ಈವರೆಗೆ ಎಲ್ಲೂ ವರದಿಯಾಗದ ವಿವರಗಳನ್ನು ಸಿನಿಮಾದಲ್ಲಿ ಹೇಳಲಿದ್ದೇನೆ' ಎಂದು ಚಿತ್ರದ ಬಗೆಗಿನ ನಿರೀಕ್ಷೆಗಳನ್ನು ರಮೇಶ್ ಹೆಚ್ಚಿಸಿದ್ದಾರೆ.

ಕನ್ನಡದ ಜೊತೆಗೆ ಹಿಂದಿ, ತೆಲುಗು ಹಾಗೂ ತಮಿಳು ಭಾಷೆಗಳಲ್ಲೂ 'ಆಸ್ಫೋಟ' ರೂಪುಗೊಳ್ಳಲಿದೆ. ಬೆಂಗಳೂರು, ಚೆನ್ನೈ, ದೆಹಲಿ ಹಾಗೂ ಶ್ರೀಲಂಕಾದಲ್ಲಿ ಚಿತ್ರೀಕರಣ ನಡೆಯಲಿದೆ. ಸದ್ಯಕ್ಕೆ ತಮ್ಮ ಚಿತ್ರದ ಪಾತ್ರವರ್ಗವನ್ನು ರಮೇಶ್ ಗುಟ್ಟಾಗಿಟ್ಟಿದ್ದಾರೆ. ಸಂದೀಪ್ ಚೌಟ ಸಂಗೀತ ಹಾಗೂ ರತ್ನವೇಲು ಛಾಯಾಗ್ರಹಣ 'ಆಸ್ಫೋಟ' ಚಿತ್ರಕ್ಕೆ ಇರಲಿದೆ.

## ಪ್ರೇಮಕಥೆಯ ಹೆಸರಿನಲ್ಲಿ...

ಜಯತೀರ್ಥ ನಿರ್ದೇಶನದ 'ಬ್ಯೂಟಿಫುಲ್ ಮನಸುಗಳು' ಚಿತ್ರದ ಪ್ರೋಮೊ ಬಿಡುಗಡೆಯಾಗಿದೆ. ನೀನಾಸಂ ಸತೀಶ್ ಮತ್ತು ಶ್ರುತಿ ಹರಿಹರನ್ ಜೋಡಿಯ ಈ ಚಿತ್ರದ ಗೀತೆಗಳ ಧ್ವನಿ ಮುದ್ರಿಕೆ ಸದ್ಯದಲ್ಲೇ ಬಿಡುಗಡೆಯಾಗಲಿದೆ.

ತಮ್ಮ ಪ್ರತಿ ಚಿತ್ರದ ಮೂಲಕ ಪ್ರೇಕ್ಷಕರೊಂದಿಗೆ ಸದಭಿರುಚಿ ಹಾಗೂ ವೈಚಾರಿಕ ಸಂಗತಿಗಳನ್ನು ಹಂಚಿಕೊಳ್ಳುವ ಪ್ರಯತ್ನ ಜಯತೀರ್ಥ ಅವರದು. ಅವರ ನಿರ್ದೇಶನದ 'ಒಲವೇ ಮಂದಾರ' ಹಾಗೂ 'ಟೋನಿ' ಚಿತ್ರಗಳು ತಮ್ಮ ತಾಜಾತನ, ಸದಭಿರುಚಿ ಹಾಗೂ ನೆಲದ ಸೊಗಡಿನ ಕಾರಣದಿಂದ ಗಮನ ಸೆಳೆದಿದ್ದವು. ಆದರೆ, ಶರಣ್ ನಾಯಕರಾಗಿ ನಟಿಸಿದ್ದ 'ಬುಲೆಟ್ ಬಸ್ಯಾ' ಚಿತ್ರದಲ್ಲಿ ಜಯತೀರ್ಥ ಅವರ ಸದಭಿರುಚಿ ಕ್ಷೀಣಿಸಿದಂತಿತ್ತು. ಆದರೆ, ಪ್ರತಿ ಚಿತ್ರವೂ ತಮ್ಮ ಪಾಲಿಗೆ ಒಂದು ವಿಶೇಷ ಎನ್ನುತ್ತಾರೆ

'ಬ್ಯೂಟಿಫುಲ್ ಮನಸುಗಳು' ಪ್ರೇಮಕಥನದ ಚಿತ್ರ. ಲವ್‌ಸ್ಟೋರಿ ಎಂದ ಮಾತ್ರಕ್ಕೆ ಹದಿಹರೆಯದ ತರುಣ ತರುಣಿಯ ನಡುವಣ ಕುದಿಪ್ರೇಮದ ಕಥೆ ಎಂದು ಭಾವಿಸುವಂತಿಲ್ಲ. ಪ್ರೇಮಕಥೆಯ ಹೆಸರಿನಲ್ಲಿ ಬದುಕಿನ ಅನುಭವಗಳನ್ನು ನೋಡುಗರಿಗೆ ದಾಟಿಸುವ ಉದ್ದೇಶ ಜಯತೀರ್ಥ ಅವರದು. ಚಿತ್ರದ ಶೀರ್ಷಿಕೆ ಸೂಚಿಸುವಂತೆ ಇದು ಅಂತರಂಗದ ಸೌಂದರ್ಯದ ಬಗ್ಗೆ ಮಾತನಾಡುವ ಕಥನದ ಸಿನಿಮಾ. ಹೊಸ ಬಗೆಯ ಪ್ರಯತ್ನಗಳನ್ನು ಪ್ರೇಕ್ಷಕರು ಬೆಂಬಲಿಸುತ್ತಿರುವ ಸಂದರ್ಭದಲ್ಲಿ 'ಬ್ಯೂಟಿಫುಲ್ ಮನಸುಗಳು' ಕೂಡ ಗೆಲ್ಲುವ ನಿರೀಕ್ಷೆ ಜಯತೀರ್ಥ ಅವರದು.

